ಜಲಪಾತದ ಬುಡ ತಲುಪಲು ಹಳ್ಳದ ಹರಿವಿನಲ್ಲೇ ಒಂದಿಷ್ಟು ದೂರ ನಡೆಯಬೇಕು. ಎಚ್ಚರಿಕೆಯ ಹೆಜ್ಜೆಗಳನ್ನಿಡದಿದ್ದರೆ ಅಪಾಯ ಖಚಿತ.

ಸಾಮಾನ್ಯವಾಗಿ ಅಲ್ಲಿಗೆ ತೆರಳಿ ನೀರಲ್ಲಿ ಆಟವಾಡುವಷ್ಟರಲ್ಲಿ ಮಧ್ಯಾಹ್ನವಾಗುತ್ತದೆ. ಹೊಟ್ಟೆಯೊಳಗಿಂದ ಹಸಿವಿನ ಸುದ್ದಿ ಪ್ರಕಟಗೊಳ್ಳಲು ಶುರುವಾಗುತ್ತದೆ. ನೀರಿನಲ್ಲಾಡಿ ದಣಿದವರಿಗೆ ಅನತಿ ದೂರದಲ್ಲಿಯೇ ಹವ್ಯಕ ಮಾರ್ಟ್ ಇದೆ. ಇಲ್ಲಿ ಊಟ ಮಾಡಲು ಬಯಸುವವರು ಮುಂಗಡವಾಗಿ ಊಟಕ್ಕೆ ಆರ್ಡರ್ ಮಾಡಿರಬೇಕು. (ಹವ್ಯಕ ಮಾರ್ಟಿನ ಸಂಪರ್ಕ: ನಾಗೇಂದ್ರ ಆನಗೋಡ್ 98448 56556)

## ನೀರ ಜಾಡಿನಲ್ಲಿ ಟ್ರೆಕ್ಕಿಂಗ್ ಮೋಡಿ

ಸಾತೊಡ್ಡಿಯ ನೆತ್ತಿಯ ಮೇಲೆ ಅಷ್ಟಾಗಿ ಪರಿಚಿತವಲ್ಲದ ಇನ್ನೊಂದು ಜಲಪಾತವಿದೆ. ಅದು ದಬ್ಬೇಸಾಲ್. ದಬ್ಬೇಸಾಲ್ ಜಲಪಾತ ಒಟ್ಟು ಎಂಟು ಹಂತಗಳಲ್ಲಿ ಸುರಿಯುತ್ತದೆ. ದಬ್ಬೇಸಾಲಿನಿಂದ ಸಾತೊಡ್ಡಿಗೆ ಹಳ್ಳದ ಅಂಚಿನಲ್ಲಿ ಕಲ್ಲುಬಂಡೆಗಳ ಮೇಲೆ ನಾಜೂಕಿನಿಂದ ಕಾಲಿಡುತ್ತ ಸಾಹಸಮಯ ಟ್ರೆಕಿಂಗ್ ಮಾಡಬಹುದು. ಮಳೆಗಾಲದಲ್ಲಿ ಮಾತ್ರ ಕಡುಕೆಂಪು ನೀರು ರೌದ್ರಾವತಾರವಾಗಿ ಧುಮ್ಮಿಕ್ಕುವುದರಿಂದ ಹೋಗಲಸಾಧ್ಯ. (ಟ್ರೆಕಿಂಗ್ ಮತ್ತು ವಸತಿಗಾಗಿ ದತ್ತಾತ್ರೇಯ ಗಾಂವ್ಕರ ದಬ್ಬೇಸಾಲ 08419242518 ಇವರನ್ನು ಸಂಪರ್ಕಿಸಬಹುದು)

ಸಾತೊಡ್ಡಿಯಿಂದ ಹಿಂತಿರುಗುವಾಗ ಶಿವಪುರ ತೂಗುಸೇತುವೆ ಕಾಣುತ್ತದೆ. ಕಾಳಿ ಹೊಳೆಗೆ ಕಟ್ಟಲಾದ ಸೇತುವೆಯ ಮೇಲಿಂದ ತಂಪು ಗಾಳಿ ಸೇವಿಸುತ್ತ ಹಿನ್ನೀರನ್ನು ಕಣ್ಣಲ್ಲಿ ತುಂಬಿಕೊಳ್ಳುವಾಗ ಹಿತವಾದ ಆನಂದ ಪ್ರಾಪ್ತಿಯಾಗುತ್ತದೆ.



## ಚಂದವುಂಟು ಚಂದಗುಳಿ

ಜಲಪಾತ ದರ್ಶನಗಳ ನಡುವೆ ಎಲ್ಲಾದರೂ ಬಿಡುವಾದಲ್ಲಿ ಚಂದಗುಳಿಯ ಪ್ರಸಿದ್ಧ ಘಂಟೆ ಗಣಪತಿಯ ದರ್ಶನ ಮಾಡಲೇಬೇಕು. ಇಲ್ಲಿ ಎಲ್ಲಿ ನೋಡಿದರೂ ಘಂಟೆಗಳೇ ಘಂಟೆಗಳು. ಯಾವುದೇ ಸಮಸ್ಯೆಯಿರಲಿ, ಘಂಟೆ ನೀಡುವುದಾಗಿ ಹರಕೆ ಹೇಳಿಕೊಂಡರೆ ಆಯಿತು. ಸಮಸ್ಯೆಗೆ ಪರಿಹಾರ ಶತಸಿದ್ಧ ಎನ್ನುವುದು ಈ ದೇಗುಲದ ಜೊತೆಗಿರುವ ನಂಬಿಕೆ. ಯಲ್ಲಾಪುರದಿಂದ ಮಾಗೋಡು ಜಲಪಾತಕ್ಕೆ ಹೋಗುವ ದಾರಿಯಲ್ಲೇ ಚಂದಗುಳಿಯ ಘಂಟೆ ಗಣಪನ ದೇಗುಲವಿದೆ. ಯಲ್ಲಾಪುರದಿಂದ 17 ಕಿ.ಮೀ. ದೂರವಾಗುತ್ತದೆ. ಯಲ್ಲಾಪುರದಿಂದ ಮಾಗೋಡು ಬಸ್ಸಿಗೆ ದೇಗುಲದ ಕ್ರಾಸಿನಿಂದ ಹೋದರೆ ಎರಡು ಕಿ.ಮೀ. ನಡೆಯಬೇಕು. ಇತ್ತೀಚೆಗೆ ಚಂದಗುಳಿ ದೇವಸ್ಥಾನದವರೆಗೂ ಬಸ್ಸಿನ ಸೇವೆಯನ್ನು ಪ್ರಾರಂಭಿಸಲಾಗಿದೆ.

## ಮಾಗೋಡಿಗೆ ಹೋಗಲು ಮರೆಯದಿರಿ

ಸಾತೊಡ್ಡಿಯಿಂದ ಮರಳಿ ಬಂದು ಯಲ್ಲಾಪುರದಲ್ಲಿ ಒಮ್ಮೆ ಫ್ರೆಶ್‌ಅಪ್ ಆಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರವಾರದ ಕಡೆ ಹೊರಟರೆ ಮಾಗೋಡ್ ಕ್ರಾಸ್ ಸಿಗುತ್ತದೆ. ಅಲ್ಲಿಂದ ಸುಮಾರು 7 ಕಿ.ಮೀ. ಹೋಗಿ ಎಡಕ್ಕೆ ತಿರುಗಿದರೆ ಅನತಿ ದೂರದಲ್ಲಿಯೇ ಕೌಡಿಕೆರೆ. ವಿಶಾಲವಾದ ಕೆರೆಯ ದಡದಲ್ಲಿ ದೇವಿಯ ದೇಗುಲವಿದೆ. ಪುರಾಣಗಳ ಪ್ರಕಾರ ಇಲ್ಲಿ ಭೀಮನು ದೇವಿಯ ಮಂದಿರ ನಿರ್ಮಿಸಿದನೆಂದು ಪ್ರತೀತಿ. ಕೆರೆಯನ್ನು ಸುತ್ತುವರೆದಿರುವ ಹಸಿರು ಕಾನನದಲ್ಲಿ ಕ್ಷಣ ಬಿಡುವಿಲ್ಲದೆ ಚಿಲಿಪಿಲಿಗುಡುವ ಹಕ್ಕಿಗಳ ದನಿ ಕೇಳುತ್ತಾ ಒಮ್ಮೆ ಕೆರೆಯನ್ನು ಸುತ್ತು ಹಾಕುವುದು ಚಂದದ ಅನುಭವ. ಆಕಾಶಕ್ಕೆ ಕನ್ನಡಿ ಹಿಡಿದಂಥ ದೊಡ್ಡ ಕೆರೆ! ಮೋಡದೊಟ್ಟಿಗೇ ಓಡುವ ಮೋಡದ ನೆರಳು. ಹಿತವಾದ ತಂಗಾಳಿ. ಆಗಾಗ ಕೆರೆಯಲ್ಲಿ ತೇಲುತ್ತ ಪಟಕ್ಕನೆ ಮೀನು ಹಿಡಿದು ಹಾರುವ ಬಕಪಕ್ಷಿಗಳನ್ನು ನೋಡುತ್ತ ಕೆರೆಯನ್ನು ಸುತ್ತು ಹಾಕಲು ಪ್ರಾರಂಭಿಸಿದರೆ ಸಮಯದ ಪರಿವೆಯೇ ಇರದು!

ಅಲ್ಲಿಂದ ಮುಂದೆ 15 ಕಿ.ಮೀ. ದೂರ ತೆರಳಿದರೆ ರಮಣೀಯ ಮಾಗೋಡು ಫಾಲ್ಸ್. 200 ಮೀಟರ್ ಎತ್ತರದಿಂದ ಎರಡು ಹಂತದಲ್ಲಿ ಧುಮುಕುತ್ತದೆ. ಪಶ್ಚಿಮ ಘಟ್ಟದ ಸೆರಗಿನ ಮಧ್ಯೆ ಬೇಡ್ತಿ ಅಷ್ಟು ಎತ್ತರದಿಂದ ಜಿಗಿಯುವುದನ್ನು ನೋಡುವುದೇ ಚಂದ. ಜಲಪಾತದ ಆಳ ಬುಡಕ್ಕೆ ಹೋಗಲು ಸಾಧ್ಯವಾಗದಿದ್ದರೂ ಆಗುವ ಖುಷಿಗೇನು ಕಡಿಮೆಯಿಲ್ಲ. ಇಲ್ಲೊಂದು ಚಿಕ್ಕ ಪ್ರವಾಸಿ ಮಂದಿರವೂ ಇದೆ.

ಮಾಗೋಡು ಫಾಲ್ಸ್ ನೋಡಿ ಹಿಂತಿರುಗುವಾಗ ಒಮ್ಮೆ ಸಮಯ ನೋಡಿಕೊಳ್ಳಿ. ಸೂರ್ಯಾಸ್ತವಾಗಲು ಇನ್ನೂ ತಡವಿದೆಯೆಂದಾದರೆ ಬರುವ ದಾರಿಯಲ್ಲಿ 8 ಕಿ.ಮೀ. ದೂರದಲ್ಲಿ ಮತ್ತೊಂದು ಚಿಕ್ಕ ಜಲಪಾತವಿದೆ. ಅದೇ ಕುಳಿ ಮಾಗೋಡು. ಹಳ್ಳದ ಹರಿವಿನಲ್ಲೇ ನಡೆದು ಜಲಪಾತವನ್ನು ತಲುಪಬೇಕು. ಮಾಗೋಡು ಜಲಪಾತದಲ್ಲಿ ನೀವು ದೂರದಿಂದ ಖುಷಿ ಪಡೆದರೆ ಕುಳಿಮಾಗೋಡಿನಲ್ಲಿ ಜಲಪಾತದಡಿಯೇ ತೆರಳಬಹುದು. ಮೈಯೊದ್ದೆ ಮಾಡಿಕೊಂಡು ಬಿಸಿಲನ್ನು ದೂರ ತಳ್ಳಬಹುದು.

ಹೆಚ್ಚು ತಡಮಾಡಬೇಡಿ! ನೀವು ಸೂರ್ಯಾಸ್ತದ ವೀಕ್ಷಣೆಗೆ ಹತ್ತಿರದಲ್ಲೇ ಇರುವ ಜೇನುಕಲ್ಲುಗುಡ್ಡಕ್ಕೆ ತಲುಪಲೇಬೇಕು.

## ಸೂರ್ಯಾಸ್ತಕ್ಕೆ ಜೇನ ಸವಿ!

ಸಮುದ್ರಮಟ್ಟದಿಂದ 450 ಮೀಟರ್ ಎತ್ತರದಲ್ಲಿರುವ ಜೇನುಕಲ್ಲುಗುಡ್ಡದಲ್ಲಿ ಸೂರ್ಯಾಸ್ತ ನಯನ ಮನೋಹರ. ಕಣ್ಣು ಹಾಯಿಸಿದಷ್ಟೂ ವಿಶಾಲ ಹಸಿರಿನ ಬಯಲು. ನಡುವೆ ಇಂಚು ಪಟ್ಟಿಯಲ್ಲಿ ಗೆರೆ ಎಳೆದ ಹಾಗೆ ಹರಿದ ಬೇಡ್ತಿ. ಘಟ್ಟದ ಮತ್ತೊಂದು ಪಾರ್ಶ್ವದಿಂದ ಹರಿದು ಬರುವ ಬಿಳಿಹೊಳೆಯು ಬೇಡ್ತಿಗೆ ಸೇರಿ ಮುಂದೆ ಗಂಗಾವಳಿಯಾಗಿ ಹರಿಯುತ್ತದೆ. ಸಂಗಮ ಸೂರ್ಯಾಸ್ತಗಳೆರಡು ಕೂಡಿ ಸುಂದರ ಹಾಡು ಹಾಡುತ್ತವೆ. ಜೇನುಕಲ್ಲು ಗುಡ್ಡದ ಹೆಸರಿಗೆ ಅನ್ವರ್ಥವಾಗುವಂಥ ನೋಟವೊಂದನ್ನು ನೀವು ಆಸ್ವಾದಿಸಬಹುದು.

ಈ ಎಲ್ಲ ತಾಣಗಳಿಗೂ ಮೊಟ್ಟೆಗದ್ದೆ ಎನ್ನುವ ಜಾಗವೇ ಜಂಕ್ಷನ್. ಇಲ್ಲಿಂದ ಮಾಗೋಡು ಜಲಪಾತ ಎರಡೂವರೆ, ಜೇನುಕಲ್ಲು ಗುಡ್ಡ ಮೂರು ಮತ್ತು ಕುಳಿಮಾಗೋಡು ಅಜಮಾಸು ನಾಲ್ಕು ಕಿ.ಮೀ. ದೂರವಾಗುತ್ತದೆ.

(ಮಾಗೋಡು, ಕುಳಿಮಾಗೋಡು ಜಲಪಾತ ಮತ್ತು ಜೇನುಕಲ್ಲು ಗುಡ್ಡಗಳ ತಿರುಗಾಟಕ್ಕೆ ಜೊತೆಯಾಗಲು ಇವರನ್ನು ಸಂಪರ್ಕಿಸಬಹುದು. ಸತೀಶ್ ಮಾಗೋಡು: 89707 41424)

ಈ ಎಲ್ಲ ಜಲಪಾತಗಳು ಅಡವಿಯ ನಡುವೆ ಇರುವುದರಿಂದ ಬಹುತೇಕ ಎಲ್ಲೂ ಮೊಬೈಲ್ ಸಿಗ್ನಲ್ ದೊರಕುವುದಿಲ್ಲ. ಸಿಕ್ಕರೂ ಅಲ್ಲಲ್ಲಿ ಬಿ.ಎಸ್.ಎನ್.ಎಲ್. ಮಾತ್ರ. ಜಗದ ಚಿಂತೆ ಮರೆತುಬಿಡುವುದೇ ಸರಿ.

ಸೂರ್ಯಾಸ್ತ ನೋಡಿದ ತರುವಾಯ ಆದಷ್ಟೂ ಬೇಗ ಹೊರಡುವುದು ಉತ್ತಮ. ಯಲ್ಲಾಪುರಕ್ಕೆ ತಲುಪಿ ರೂಮಿನಲ್ಲಿ ವಿಶ್ರಾಂತಿ ಪಡೆಯಿರಿ. ಚಹಾದ ಜೊತೆ ಪೇಟೆಯಲ್ಲಿ ಮಲೆನಾಡಿನ ಅಪ್ಪೆಹುಳಿ, ತಂಬುಳಿ ಊಟವನ್ನು ಸವಿಯಲು ಮರೆಯದಿರಿ. ಹುಳಿ ಮಾವಿನಕಾಯಿಯ ಚಟ್ನಿ, ಹಲಸಿನಕಾಯಿಯ ಹುಳಿಯನ್ನೂ ಸಹ ಊಟದ ತಟ್ಟೆಯಲ್ಲಿ ಸೇರಿಸಿಕೊಳ್ಳಿ. ಮಲೆನಾಡಿನ ಸ್ವಾದಿಷ್ಟ ಭೋಜನ ಒಳ್ಳೆಯ ನಿದ್ದೆ ತರಿಸುತ್ತದೆ. ದಿನವಿಡೀ ಪ್ರವಾಸದ ಮಾತು ಕಥೆಯ ಜೊತೆಗೆ ತೆಗೆದ ಖುಷಿಯ ಕ್ಷಣಗಳ ಚಿತ್ರಗಳನ್ನು ನೋಡುತ್ತ